ವಿಶ್ವ ಯೋಜನೆಯಡಿಯಲ್ಲಿ ತರಬೇತಿ ಮತ್ತು ಮೂಲಭೂತ ಸೌಕರ್ಯಗಳ ಸೃಷ್ಟಿಗೆ ಅವಕಾಶ ಮಾಡಿಕೊಡಲಾಗುತ್ತದೆ. ಖಾದಿ ಗ್ರಾಮೋದ್ಯೋಗ ಕ್ಷೇತ್ರದಲ್ಲಿಯೂ ಸಹ ಕಸಬುದಾರರಿಗೆ ಘಟಕಗಳನ್ನು ಸ್ಥಾಪಿಸಲು ಹಣಕಾಸು ಸಂಸ್ಥೆಯ ನೆರವಿನೊಂದಿಗೆ ಮಂಡಳಿಯಲ್ಲಿ ಅಂಚು ಹಣ ನೀಡಲಾಗುತ್ತಿದೆ.

ಕರಕುಶಲ ಕಸಬುದಾರರು ತಮ್ಮ ಚಟುವಟಿಕೆಗಳನ್ನು ಸಂಘಟಿತ ರೂಪದಲ್ಲಿ ಕೈಗೊಳ್ಳಲು ನೆರವಾಗುವಂತೆ ಕಾಯಕ ನಗರಗಳನ್ನು ರಾಜ್ಯದ ವಿವಿದಡೆ ಸ್ಥಾಪಿಸುವ ಯೋಜನೆಯನ್ನೂ ಸಹ ಕೈಗೊಳ್ಳಲಾಗಿದೆ.

ಇ) ಪ್ರತಿ ಕ್ಷೇತ್ರದ ಕಸಬುದಾರರ ನೈಪುಣ್ಯತೆಯನ್ನು ಹೆಚ್ಚಿಸುವ ರೀತಿಯಲ್ಲಿ ತರಬೇತಿ ಕಾರ್ಯಕ್ರಮಗಳು ಹಾಗು ಆಧುನಿಕ ಸಲಕರಣೆಗಳನ್ನು ಸಂಬಂಧಪಟ್ಟ ಕ್ಷೇತ್ರದ ಅಂದರೆ ಚರ್ಮೋದ್ಯಮ, ನಾರು, ಕೈಮಗ್ಗ, ಕರಕುಶಲ, ಗ್ರಾಮೋದ್ಯೋಗ ಮುಂತಾದ ನಿಗಮಗಳ/ಮಂಡಳಿಗಳಿಂದ ನೀಡಲಾಗುತ್ತದೆ. ಜೊತೆಯಲ್ಲಿ ಪ್ರತಿಯೊಂದು ಕಾಯಕ ನಗರದಲ್ಲೂ ಸಹ ಸಾಮೂಹಿಕ ಕಾರ್ಯಾಗಾರಗಳನ್ನು ನಿರ್ಮಿಸುವ ಉದ್ದೇಶವಿದೆ.

ಈ) ಈ ಯೋಜನೆಯು ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಯಡಿ ಜಾರಿಯಲ್ಲಿರುವುದಿಲ್ಲ.

ಮೈಸೂರು ಸುತ್ತ ಮುತ್ತ ಕೈಗಾರಿಕೆಗಳಿಗಾಗಿ ಜಮೀನು ಸ್ವಾಧೀನ

166(361) ಶ್ರೀ ಶಂಕರಲಿಂಗೇಗೌಡ ಹೆಚ್. ಎಸ್.(ಚಾಮರಾಜ) : ಮಾನ್ಯ ಭಾರಿ, ಮಧ್ಯಮ ಹಾಗು ಸಣ್ಣ ಕೈಗಾರಿಕೆಗಳು ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಮೈಸೂರು ನಗರ ಸುತ್ತಮುತ್ತ ಮೈಸೂರು ತಾಲ್ಲೂಕುಗಳಲ್ಲಿ, ಕೈಗಾರಿಕೆಗಳ ಸ್ಥಾಪನೆ ಹಾಗೂ ಅಭಿವೃದ್ಧಿಗಾಗಿ ಭೂಸ್ವಾಧೀನ ಪಡಿಸಿಕೊಂಡ ಜಮೀನುಗಳು ಎಷ್ಟು ;

ಆ) ಅವುಗಳ ಜಮೀನುದಾರರಿಗೆ ಇನ್ನೂ ಪರಿಹಾರ ನೀಡಲು ಬಾಕಿ ಇರುವ ಪ್ರಕರಣಗಳು ಎಷ್ಟು ; (ವಿವರಗಳನ್ನು ನೀಡುವುದು) ;

ಇ) ಬಾಕಿ ಇರುವ ಸದರಿ ಪ್ರಕರಣಗಳು ಯಾವ ಯಾವ ಹಂತದಲ್ಲಿದೆ ;

ಈ) ಸದರಿ ಪ್ರಕರಣಗಳನ್ನು ಇತ್ಯರ್ಥಪಡಿಸಲು ಸರ್ಕಾರದ ವತಿಯಿಂದ ಯಾವ ಯಾವ ಪ್ರಯತ್ನಗಳನ್ನು ಮಾಡಲಾಗಿದೆ ; (ಪ್ರಕರಣವಾರು ವಿವರಗಳನ್ನು ನೀಡುವುದು) ;

ಉ) ಈ ಪ್ರಕರಣಗಳ ಜಮೀನುದಾರರ ಕೋರಿಕೆಯಾದರೂ ಏನು ; (ಪ್ರಕರಣವಾರು ವಿವರ ತಿಳಿಸಿ) ?

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಭಾರಿ, ಮಧ್ಯಮ ಹಾಗು ಸಣ್ಣ ಕೈಗಾರಿಕೆಗಳು ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ಸಚಿವರು) :

ಅ) ಮೈಸೂರು ತಾಲ್ಲೂಕಿನಲ್ಲಿ ಕೈಗಾರಿಕಾ ಉದ್ದೇಶಗಳಿಗೆ ಸ್ವಾಧೀನಪಡಿಸಿಕೊಂಡಿರುವ ಜಮೀನುಗಳ ವಿವರಗಳು ಈ ಕೆಳಕಂಡಂತೆ ಇದೆ :

ಮೈಸೂರು ತಾಲ್ಲೂಕಿನ, ಕಸಬಾ ಹೋಬಳಿ, ಹೆಬ್ಬಾಳು, ಹಿನಕಲ್, ಹೂಟಗಳ್ಳಿ, ಕೂರ್ಗಳ್ಳಿ, ಮೇಟಗಳ್ಳಿ, ಶ್ಯಾದನಹಳ್ಳಿ, ಬಲವತ್ತ, ನಾಗನಹಳ್ಳಿ, ಬೆಲವಾಡಿ, ಇಲವಾಲ, ಬ್ಯಾತಹಳ್ಳಿ ಸಿಂಧುವಳ್ಳಿ, ಮರಶೆ, ಚಿಕ್ಕಕಾನ್ಯ, ಕುರುಬರಹಳ್ಳಿ ಮತ್ತು ಮೈಸೂರು ಗ್ರಾಮಗಳು ಸೇರಿದಂತೆ ಒಟ್ಟು 3844–08 ಎಕರೆ ಪ್ರದೇಶವನ್ನು ಭೂಸ್ವಾಧೀನಪಡಿಸಲಾಗಿದೆ

ಆ) ಪರಿಹಾರ ನೀಡಲು ಬಾಕಿ ಇರುವ ಪ್ರಕರಣಗಳ ವಿವರ:

1) ಹೆಬ್ಬಾಳು ಮತ್ತು ಮೇಟಗಳ್ಳಿ ಗ್ರಾಮಗಳಲ್ಲಿ ವರ್ತುಲ ರಸ್ತೆಗಾಗಿ ಸ್ವಾಧೀನಪಡಿಸಿರುವ 85.89 ಎಕರೆ ಪೈಕಿ 31 ಜನ ಭೂಮಾಲೀಕರಿಗೆ 35-35 ಎಕರೆ ವಿಸ್ತೀರ್ಣಕ್ಕೆ ಅವಾರ್ಡ್ ರೀತ್ಯಾ ರೂ. 6,61,187-ಗಳನ್ನು ಪಾವತಿಸಲು ಬಾಕಿ ಇರುತ್ತದೆ. ಹಣ ಪಡೆದುಕೊಳ್ಳಲು ನೋಟೀಸು ನೀಡಲಾಗಿದೆ.

2) ಹೆಬ್ಬಾಳು ಗ್ರಾಮದಲ್ಲಿ ಪಂಪ್‌ಹೌಸ್‌ಗಾಗಿ ಭೂಸ್ವಾಧೀನಪಡಿಸಿರುವ 0-20 1/2 ಗುಂಟೆ ಜಮೀನಿಗೆ 6 ಜನ ಭೂಮಾಲೀಕರಿಗೆ ರೂ. 1.49.645-00 ಗಳನ್ನು ಪಾವತಿಸಲು ಬಾಕಿ ಇರುತ್ತದೆ. ಹಣ ಪಡೆದುಕೊಳ್ಳಲು ನೋಟೀಸು ನೀಡಲಾಗಿದೆ. ಭೂಮಾಲೀಕರು ಪರಿಹಾರ ಪಡೆದಿರುವುದಿಲ್ಲ.

3) ಮೈಸೂರು ಗ್ರಾಮದಲ್ಲಿ ಮೆ: ಸೀಕಾ ಇಂಟರ್‌ಪ್ಲಾಂಟ್ ಸಿಸ್ಟಮ್ಸ್‌ರವರಿಗಾಗಿ ಸ್ವಾಧೀನಪಡಿಸಿರುವ 8-33 ಎಕರೆ ಪೈಕಿ 3-33 ಎಕರೆ ಜಮೀನಿಗೆ ಸಿವಿಲ್ ನ್ಯಾಯಾಲಯದಲ್ಲಿ ಪ್ರಕರಣ ಬಾಕಿ ಇರುತ್ತದೆ.

4) ಹೊಸ ನೋಟು ಮುದ್ರಣಾಲಯ ಉದ್ದೇಶಕ್ಕೆ ಬೆಲವತ್ತ, ನಾಗನಹಳ್ಳಿ, ಶ್ಯಾದನಹಳ್ಳಿ ಮತ್ತು ಮೇಟಗಳ್ಳಿ ಗ್ರಾಮಗಳಲ್ಲಿ ಒಟ್ಟು 337-02 ಎಕರೆ ಪೈಕಿ 42-30 ಎಕರೆ ಜಮೀನಿನ ಭೂಮಾಲೀಕರು ಒಪ್ಪಂದದ ದರದಲ್ಲಿ ಪರಿಹಾರ ಪಡೆಯಲು ಒಪ್ಪದೆ ಇರುವ ಕಾರಣ ಅವಾರ್ಡ್ ರೀತ್ಯಾ ಪರಿಹಾರ ನಿರ್ಧರಿಸಲಾಗಿದ್ದು, ನೋಟೀಸುಗಳನ್ನು ಜಾರಿ ಮಾಡಲಾಗಿದೆ. 69 ಜನ ಭೂಮಾಲೀಕರ ಪೈಕಿ ಒಬ್ಬರು ಪರಿಹಾರ ಪಡೆದಿರುತ್ತಾರೆ. ಇತರೆ ಕೆಲವರು ದಾಖಲೆ ಒದಗಿಸಲು ಕಾಲಾವಕಾಶ ಕೋರಿರುತ್ತಾರೆ. ಹಾಗೂ ಕೆಲವು ಪ್ರಕರಣಗಳು ಪಿ.ಟಿ.ಸಿ.ಎಲ್. ಕಾಯ್ದೆಯನ್ವಯ ವಿಚಾರಣೆಯಲ್ಲಿವೆ.

5) ಮೆ: ಟಿ.ವಿ.ಎಸ್. ಕಂಪನಿಗೆ ಮೈಸೂರು ತಾಲ್ಲೂಕ್, ಸಿಂಧುವಳ್ಳಿ, ಬ್ಯಾತಹಳ್ಳಿ ಗ್ರಾಮಗಳಲ್ಲಿ ಸ್ವಾಧೀನಪಡಿಸಿರುವ ಜಮೀನಿನ ಪೈಕಿ ಈ ಕೆಳಕಂಡ ವಿಸ್ತೀರ್ಣಗಳಿಗೆ ಪರಿಹಾರ ಪಾವತಿಗೆ ಬಾಕಿ ಇರುತ್ತದೆ. ಬ್ಯಾತಹಳ್ಳಿ ಗ್ರಾಮದ 8 ಜನ ಭೂಮಾಲೀಕರಿಗೆ 12-11 ಎಕರೆ ವಿಸ್ತೀರ್ಣಕ್ಕೆ ರೂ. 16.57,125-00 ಗಳ ಪರಿಹಾರ ಪಾವತಿಸಲು ಬಾಕಿ ಇರುತ್ತದೆ. ಸಿಂಧುವಳ್ಳಿ ಗ್ರಾಮದ ಇಬ್ಬರು ಭೂಮಾಲೀಕರಿಗೆ 3-09 ಎಕರೆ ವಿಸ್ತೀರ್ಣಕ್ಕೆ ರೂ. 4,35,375-00ಗಳ ಪರಿಹಾರ ಪಾವತಿಸಲು ಬಾಕಿ ಇರುತ್ತದೆ. ಸದರೀ ಭೂಮಾಲೀಕರು ಸಿವಿಲ್ ನ್ಯಾಯಾಲಯದಲ್ಲಿ ಸಿವಿಲ್ ವಿವಾದ ದಾಖಲು ಮಾಡಿರುವ ಕಾರಣ ಪರಿಹಾರ ಪಾವತಿಗೆ ಬಾಕಿ ಇರುತ್ತದೆ.

ಇ) ಬಾಕಿ ಇರುವ ಪ್ರಕರಣಗಳ ವಿವಿಧ ಹಂತಗಳು:

1) ಹೆಬ್ಬಾಳು ಮತ್ತು ಮೇಟಗಳ್ಳಿ ಗ್ರಾಮದ ಭೂಮಾಲೀಕರು ಸಿವಿಲ್ ನ್ಯಾಯಾಲಯ ಮತ್ತು ಉಚ್ಚನ್ಯಾಯಾಲಯದಲ್ಲಿ ಪ್ರಕರಣ ದಾಖಲುಮಾಡಿದ್ದು, ಇತ್ಯರ್ಥವಾಗಬೇಕಾಗಿದೆ ಹಾಗೂ ಕೆಲವು ಭೂಮಾಲೀಕರು ಜಮೀನುಗಳು ನಗರಾಸ್ತಿಮಿತಿ ಮತ್ತು ನಗರಾಭಿವೃದ್ಧಿ ಪ್ರಾಧಿಕಾರದವರಿಂದ ಸ್ವಾಧೀನವಾಗಿರುವ ಮೇರೆಗೆ ಸಂಬಂಧಪಟ್ಟ ಪ್ರಾಧಿಕಾರದಿಂದ ಮಾಹಿತಿ ಪಡೆಯಲಾಗುತ್ತಿದೆ.

2) ಹೆಬ್ಬಾಳು ಗ್ರಾಮದ ಭೂಮಾಲೀಕರು ಪರಿಹಾರ ಪಡೆಯಲು ಮುಂದೆ ಬರುತ್ತಿಲ್ಲ. ನೋಟೀಸು ಜಾರಿ ಮಾಡಿದೆ. ಭೂಮಾಲೀಕರು ಭೂಸ್ವಾಧೀನಕ್ಕೆ ವಿರೋಧಿಸಿ, ಪರಿಹಾರ ಪಡೆಯಲು ನಿರಾಕರಿಸಿದ್ದಾರೆ.

3) ಮೈಸೂರು ಗ್ರಾಮದ 3–33 ಎಕರೆ ವಿಸ್ತೀರ್ಣದ ಬಗ್ಗೆ ಸಿವಿಲ್ ನ್ಯಾಯಾಲಯದಲ್ಲಿ ವಿವಾದ ಬಾಕಿ ಇರುವುದರಿಂದ ಮುಂದಿನ ಕ್ರಮ ತಟಸ್ಥವಾಗಿದೆ.

4) ಇಬ್ಬರು ಸಿವಿಲ್ ನ್ಯಾಯಾಲಯದಲ್ಲಿ ಅಸಲು ದಾವಾ ದಾಖಲುಮಾಡಿದ್ದು, ಬಾಕಿ ಇರುತ್ತದೆ. ಕೆಲವರು ಪಿ.ಟಿ.ಸಿ.ಎಲ್. ಕಾಯ್ದೆಗೆ ಒಳಪಡುವುದರಿಂದ ನೋಟೀಸು ಜಾರಿ ಮಾಡಿದೆ. ದಾಖಲೆ ಒದಗಿಸಲು ಸೂಚಿಸಲಾಗಿದೆ.

5) ಸದರಿ ಪ್ರಕರಣಗಳು ಸಿವಿಲ್ ನ್ಯಾಯಾಲಯದಲ್ಲಿ ವಿಚಾರಣೆ ಹಂತದಲ್ಲಿ ಇರುತ್ತದೆ.

ಈ) 1) ಹೆಬ್ಬಾಳು ಮತ್ತು ಮೇಟಗಳ್ಳಿ ಗ್ರಾಮಗಳಲ್ಲಿ ಸ್ವಾಧೀನವಾಗಿರುವ ಜಮೀನುಗಳಲ್ಲಿ ಈ ಹಿಂದೆ ನಗರಾಭಿವೃದ್ಧಿ ಪ್ರಾಧಿಕಾರ ಮೈಸೂರು ಮತ್ತು ನಗರಾಸ್ತಿಮಿತಿ ಕಾಯ್ದೆಯಡಿ ಸ್ವಾಧೀನಪಡಿಸುವ ಕ್ರಮ ವಹಿಸಲಾಗಿದ್ದು, ಭೂಮಾಲೀಕರು ಎರಡೂ ಕಡೆ ಪರಿಹಾರ ಪಾವತಿ ಪಡೆಯಲು ಪ್ರಯತ್ನಿಸಿದ ಕಾರಣ ಪರಿಹಾರ ಪಾವತಿ ತಟಸ್ಥಗೊಳಿಸಿ ಎರಡೂ ಇಲಾಖೆಯವರಿಗೆ ಮಾಹಿತಿ ನೀಡಿ ಮಂಡಳಿ ವತಿಯಿಂದ ಸ್ವಾಧೀನಪಡಿಸಿರುವ ಜಮೀನುಗಳನ್ನು ವರ್ಗಾವಣೆ ಮಾಡುವಂತೆ ಎರಡೂ ಇಲಾಖೆಗಳನ್ನು ಕೋರಲಾಗಿದೆ.

2) ಹೆಬ್ಬಾಳ ಪಂಪ್‌ಹೌಸ್‌ಗೆ ಸ್ವಾಧೀನಪಡಿಸಿರುವ ಜಮೀನಿನ ಭೂಮಾಲೀಕರು ಅವಾರ್ಡ್ ರೀತ್ಯಾ ಪರಿಹಾರ ಪಡೆದಿರುವುದಿಲ್ಲ. ನೋಟೀಸು ನೀಡಲಾಗಿದೆ. ಭೂಸ್ವಾಧೀನಕ್ಕೆ ವಿರೋಧ ಇದ್ದು. ಪರಿಹಾರ ಪಡೆಯಲು ನಿರಾಕರಿಸಿದ್ದಾರೆ. ಭೂಸ್ವಾಧೀನ ಕಾಯ್ದೆಯನ್ವಯ ನ್ಯಾಯಾಲಯದಲ್ಲಿ ಠೇವಣಿ ಮಾಡಲು ಕ್ರಮ ಕೈಗೊಂಡಿದೆ.

3) ಸೀಕಾ ಇಂಟರ್ ಪ್ಲಾಂಟ್ ಭೂಸ್ವಾಧೀನ ಪ್ರಕರಣದಲ್ಲಿ ನ್ಯಾಯಾಲಯದಲ್ಲಿ ಸಿವಿಲ್ ವಿವೆಾದ ಇದ್ದು, ನ್ಯಾಯಾಲಯದ ಆದೇಶದಂತೆ ಕ್ರಮ ವಹಿಸಬೇಕಾಗಿದೆ. ಐತೀರ್ಮ ರಚಿಸಲಾಗಿದ್ದು ಕಂಪನಿಯಿಂದ ಐತೀರ್ಮ ಮೊಬಲಗು ಜಮಾ ಮಾಡಲು ತಿಳಿಸಲಾಗಿದೆ. ಕಂಪನಿ ಮೊಬಲಗು ಜಮಾ ಮಾಡಿದ ನಂತರ ಭೂಸ್ವಾಧೀನ ಕಾಯ್ದೆಯಡಿ ನ್ಯಾಯಾಲಯದಲ್ಲಿ ಠೇವಣಿ ಮಾಡಲು ಕ್ರಮ ವಹಿಸಲಾಗುವುದು.

4) ಹೊಸ ನೋಟು ಮುದ್ರಣಾಲಯ ಭೂಸ್ವಾಧೀನ ಪ್ರಕರಣದಲ್ಲಿ ಪಿ.ಟಿ.ಸಿ.ಎಲ್. ಪ್ರಕರಣಗಳು ಮತ್ತು ಸಿವಿಲ್ ವಿವಾದ ಇರುವುದರಿಂದ ಇವುಗಳ ಆದೇಶ ಬಂದ ನಂತರ ಕ್ರಮ ವಹಿಸಲಾಗುವುದು ಹಾಗೂ ಭೂಸ್ವಾಧೀನ ಕಾಯ್ದೆಯನ್ವಯ ನ್ಯಾಯಾಲಯದಲ್ಲಿ ಪರಿಹಾರ ಮೊಬಲಗು ಠೇವಣಿ ಮಾಡಲು ಕ್ರಮ ವಹಿಸಲಾಗುವುದು.

5) ಟಿ.ವಿ.ಎಸ್. ಕಂಪನಿ ಭೂಸ್ವಾಧೀನ ಪ್ರಕರಣದಲ್ಲಿ ಭೂಮಾಲೀಕರ ವಿವಾದವು ಸಿವಿಲ್ ನ್ಯಾಯಾಲಯದಲ್ಲಿ ಇದ್ದು ನ್ಯಾಯಾಲಯದ ಆದೇಶದಂತೆ ಕ್ರಮ ವಹಿಸಲಾಗುವುದು.

ಉ) ಹೆಬ್ಬಾಳು ಗ್ರಾಮದ 0–20 $^{1}/_{2}$ ಗುಂಟೆ ಜಮೀನಿನ ಬಾಬ್ತು ಭೂಮಾಲೀಕರು ಭೂಸ್ವಾಧೀನಕ್ಕೆ ವಿರೋಧ ವ್ಯಕ್ತಪಡಿಸಿರುತ್ತಾರೆ. ಉಳಿದಂತೆ ಯಾವುದೇ ಪ್ರಕರಣಗಳಲ್ಲಿ ಜಮೀನುದಾರರ ಕೋರಿಕೆ ಯಾವುದು ಇರುವುದಿಲ್ಲ.